ಭಾಗ್ಯದ ಲಕ್ಷ್ಮೀ ಬಾರಮ್ಮ |
ನಮ್ಮಮ್ಮ ನೀ ಸೌಭಾಗ್ಯದ ಲಕ್ಷ್ಮೀ ಬಾರಮ್ಮ ||

ಹೆಜ್ಜೆಯ ಮೇಲೆ ಹೆಜ್ಜೆಯನಿಕ್ಕುತ
ಗೆಜ್ಜೆ ಕಾಲ್ಗಳ ಧ್ವನಿಯ ತೋರುತ |
ಸಜ್ಜನ ಸಾಧು ಪೂಜೆಯ ವೇಳೆಗೆ
ಮಜ್ಜಿಗೆಯೊಳಗಿನ ಬೆಣ್ಣೆಯಂತೆ || ೧ ||

ಕನಕವೃಷ್ಟಿಯ ಕರೆಯುತ ಬಾರೆ
ಮನಕಾಮನೆಯ ಸಿದ್ದಿಯ ತೋರೆ |
ದಿನಕರ ಕೋಟಿ ತೇಜದಿ ಹೊಳೆಯುವ
ಜನಕರಾಯನ ಕುಮಾರಿ ಬೇಗ || ೨ ||

ಅತ್ತಿತ್ತಲಗದೆ ಭಕ್ತರ ಮನೆಯಲಿ
ನಿತ್ಯ ಮಹೋತ್ಸವ ನಿತ್ಯ ಸುಮಂಗಳ |
ಸತ್ಯವ ತೋರುವ ಸಾಧು ಸಜ್ಜನರ
ಚಿತ್ತದಿ ಹೊಳೆಯುವ ಪುತ್ಥಳಿ ಬೊಂಬೆ || ೩ ||

ಸಂಖ್ಯೆಯಿಲ್ಲದ ಭಾಗ್ಯವ ಕೊಟ್ಟು
ಕಂಕಣ ಕೈಯ ತಿರುವುತ ಬಾರೆ |
ಕುಂಕುಮಾಂಕಿತೆ ಪಂಕಜಲೋಚನೆ
ವೆಂಕಟರಮಣನ ಬಿಂಕದ ರಾಣಿ || ೪ ||

ಸಕ್ಕರೆ ತುಪ್ಪದ ಕಾಲುವೆ ಹರಿಸಿ
ಶುಕ್ರವಾರದ ಪೂಜೆಯ ವೇಳೆಗೆ |
ಅಕ್ಕರೆಯುಳ್ಳ ಅಳಗಿರಿ ರಂಗನ
ಚೊಕ್ಕ ಪುರಂದರ ವಿಠ್ಠಲನ ರಾಣಿ || ೫ ||

Bhagyada lakshmi baramma

ಬಾರೆ ಭಾಗ್ಯದ ನಿಧಿಯೆ
ಕರವೀರನಿವಾಸಿನಿಸಿರಿಯೆ ॥ ಪ ॥

ಬಾರೆ ಬಾರೆ ಕರವೀರನಿವಾಸಿನಿ
ಬಾರಿ ಬಾರಿಗು ಶುಭ ತೋರೆ ನಮ್ಮ ಮನೆಗೆ ॥ ಅ ಪ ॥

ನಿಗಮ ವೇದ್ಯಳೆ ನೀನು । ನಿನ್ನ
ಪೊಗಳಲಾಪೆನೆ ನಾನು
ಮಗನಪರಾಧವ ತೆಗೆದೆಣಿಸದೆ । ನೀ
ಪನ್ನಗವೇಣಿಯೆ ಲಗುಬಗೆಯಿಂದಲಿ ॥ ೧ ॥

ಲೋಕಮಾತೆಯು ನೀನು । ನಿನ್ನ
ತೋಕನಲ್ಲವೆ ನಾನು
ಆಕಳು ಕರುವಿನ ಸ್ವೀಕರಿಸುವ ಪರಿ
ನೀ ಕರುಣದಿ ಕಾಲ್ ಹಾಕು ನಮ್ಮ ಮನೆಗೆ ॥ ೨ ॥

ಕಡೆಗೆ ನಮ್ಮನಿವಾಸ । ಒಡೆಯ ಅನಂತಾದ್ರೀಶ
ಒಡೆಯನಿದ್ದಲ್ಲಿಗೆ ಮಡದಿ ಬರುವುದು
ರೂಢಿಗುಚಿತವಿದು ನಡಿ ನಮ್ಮ ಮನೆಗೆ ॥ ೩ ॥

Baare bhaagyada nidhiye

ಬಾರೆ ನಮ್ಮನಿತನಕ ಭಾಗ್ಯದದೇವಿ
ಬಾರೆ ನಮ್ಮನಿತನಕ ಬಹಳ ಕರುಣದಿಂದ
ಜೋಡಿಸಿ ಕರಗಳ ಎರಗುವೆ ಚರಣಕೆ ॥ಪ॥

ಜರದ ಪೀತಾಂಬರ ನೀರೀಗೆಗಳ ಹೊಳೆಯುತ
ತರುಳನ ಮ್ಯಾಲೆ ತಾಯಿ ಕರುಣವಿಟ್ಟು ಬೇಗ ॥ ೧ ॥

ಹರಡಿ ಕಂಕಣ ದುಂಡು ಕರದಲ್ಲಿ ಹೊಳೆಯುತ
ಸರಗಿ ಸರವು ಚಂದ್ರ ಹಾರಗಳ ಹೊಳೆಯುತ ॥ ೨ ॥

ಮಂದಗಮನೆ ನಿನಗೆ ವಂದಿಸಿ ಬೇಡುವೆ
ಇಂದಿರೇಶನ ಕೂಡ ಇಂದು ನಮ್ಮನಿಗಾಗಿ ॥ ೩ ॥

Baare Nammani tanaka

ಶ್ರೀಮಹಾಲಕುಮಿ ದೇವಿಯೆ ಕೋಮಲಾಂಗಿಯೆ ಸಾಮಗಾಯನ ಪ್ರಿಯಳೆ
ಹೇಮಗರ್ಭ ಕಾಮಾರಿ ಶಕ್ರಾಸುರ ಸ್ತೋಮವಂದಿತಳೆ ಸೋಮಸೋದರಿಯೆ ॥

ಬಟ್ಟಕುಂಕುಮ ನೊಸಲೊಳೆ ಮುತ್ತಿನ ಹೊಸ ಕತ್ಠಾಣಿ ತ್ರಿವಳಿ ಕೊರಳೊಳೆ
ಇಟ್ಟ ಪೊನ್ನೋಲೆ ಕಿವಿಯೊಳೆ ಪವಳದ ಕಯ್ಯ ಕಟ್ಟು ಕಂಕಣ ಕೈ ಬಳೆ
ತೊಟ್ಟ ಕುಬುಸ ಬಿಗಿದುಟ್ಟ ಪೀತಾಂಬರ ಗಟ್ಟಿ ವಡ್ಯಾಣ ಕಾಲಂದುಗೆರುಳಿಗೆಜ್ಜೆ
ಬೆಟ್ಟಿಲಿ ಪೊಳೆವುದು ಮೇಂಟಕೆ ಕುರುಪಿಲ್ಲಿ ಇಟ್ಟು ಶೋಭಿಸುವ ಅಷ್ಟ ಸಂಪನ್ನೆ ॥ ೧ ॥

ಸಕಲ ಶುಭ ಗುಣ ಭರಿತಳೆ ಏಕೋ ದೇವಿಯೆ ವಾಕು ಲಾಲಿಸಿ ನೀ ಕೇಳೆ
ನೋಕನೀಯೆನ್ನ ಮಹಲೀಲೆ ಕೊಂಡಾಡುವಂಥ ಏಕ ಮನವ ಕೊಡು ಶೀಲೆ
ಬೇಕುಬೇಕು ನಿನ್ನ ಪತಿಪಾದಾಬ್ಜವ ಏಕಾಂತದಿ ಪೂಜಿಪರ ಸಂಘ ಕೊಡು
ಲೋಕದ ಜನರಿಗೆ ನಾಕೈಯೊಡ್ಡದಂತೆ ನೀ ಕರುಣಿಸು ತಾಯೆ ರಾಕೇಂದುವದನೆ ॥ ೨ ॥

ಮಂದರಧರನರಸಿಯೆ ಇಂದಿರೆ ಎನ್ನ ಕುಂದುದೋಷಗಳಳಿಯೆ
ಅಂದ ಸೌಭಾಗ್ಯದ ಸಿರಿಯೆ ತಾಯೆ ನಾ ನಿನ್ನ ಕಂದ ಮುಂದಕ್ಕೆ ಕರೆಯೆ
ಸಿಂಧು ಶಯನ ಸಿರಿ ವಿಜಯವಿಠಲರೇಯ ಎಂದೆಂದಿಗೆ ಮನದಿಂದಗಲದೆ
ಆನಂದದಿಂದಲಿ ಬಂದು ಮುಂದೆ ಕುಣಿಯುವಂತೆ ವಂದಿಸಿ ಪೇಳಮ್ಮ ಸಿಂಧು ಸುತೆಯಳೆ ॥ ೩ ॥

Shreemahaa lakumi deviye

ಏನು ಧನ್ಯಳೋ ಲಕುಮಿ ಎಂಥ ಮಾನ್ಯಳೋ
ಸಾನುರಾಗದಿಂದ ಹರಿಯ ತಾನೆ ಸೇವೆ ಮಾಡುತಿಹಳು ॥ಪ॥

ಕೋಟಿ ಕೋಟಿ ಭೃತ್ಯರಿರಲು । ಹಾಟಕಾಂಬರನ ಸೇವೆ ।
ಸಾಟಿಯಿಲ್ಲದೆ ಮಾಡಿ । ಪೂರ್ಣ ನೋಟದಿಂದ ಸುಖಿಸುತಿಹಳು ॥೧॥

ಛತ್ರ ಚಾಮರ ವ್ಯಜನ ಪರ್ಯಂಕ । ಪಾತ್ರ ರೂಪದಲ್ಲಿ ನಿಂತು ॥
ಚಿತ್ರ ಚರಿತನಾದ ಹರಿಯ । ನಿತ್ಯ ಸೇವೆ ಮಾಡುತಿಹಳು ॥೨॥

ಸರ್ವತ್ರದಿ ವ್ಯಾಪ್ತನಾದ । ಸರ್ವ ದೋಷರಹಿತನಾದ ॥
ಸರ್ವ ವಂದ್ಯನಾದ ಪುರಂದರ ವಿಟ್ಠಲನ್ನ ಸೇವಿಸುತಿಹಳು ॥೩॥

yenu dhanyalo

ಬಾರೆ ವೆಂಕಟರಮಣಿ । ಶ್ರೀದೇವಿ ನೀ ।
ಬಾರೆ ವೆಂಕಟರಮಣಿ ॥ ಪ ॥

ಬಾರೆ ವೆಂಕಟರಮಣಿ ಪಾರಾಯಣಿ ಕೇಳೆ ।
ಚಾರುವದನೆ ಉಪಹಾರ ಕಾಲಕೆ ನಿತ್ಯ ॥ ಅ. ಪ. ॥

ಏನು ಪುಣ್ಯವೆ ನಂದು । ಪಾರಾಯಣ ನೀನೆ ಕೇಳುವಿ ಬಂದು ।
ಹೀನ ಮಾನವರಿಗೆ ನೀನು ಬರುವಿ ಎಂಬೊ ।
ಜ್ಞಾನವಿಲ್ಲವೆ ಉಚ್ಚಸ್ಥಾನದೊಳು ಕೂಡೆ ॥ ೧ ॥

ಸ್ವಪ್ನದೊಳಗೆ ಬರುವಿ । ಶ್ರೀದೇವಿ ನೀ ಕ್ಷಿಪ್ರದಿಂದಲಿ ಪೋಗುವಿ ।
ಸರ್ಪಶಯನ ನಮ್ಮಪ್ಪ ಗೋಕುಲಬಾಲನ್ ।
ಅಪ್ಪಿಕೊಳ್ಳುವ ಸುಖ ಒಪ್ಪಿಸು ಬೇಗನೆ ॥ ೨ ॥

ಎಲ್ಲ ದೇವತೆಗಳನೆ ತಡೆದಿಯೆ । ಫುಲ್ಲ ವಾರಿಜ ನಯನೆ ।
ಗೊಲ್ಲ ಬಾಲನ ಪಾದ ಪಲ್ಲವ ನೋಡದೆ ।
ನಿಲ್ಲಲೊಲ್ಲದು ಮನ ಸೊಲ್ಲ ಲಾಲಿಸು ತಾಯಿ ॥ ೩ ॥

ಮಂಗಳಾಂಗಿಯೆ ನಿನ್ನ ನೋಡದೆ । ಬಲು ಭಂಗ ಪಡುವೆನಮ್ಮ ।
ಗಂಗಾ ಜನಕ ಶ್ರೀರಂಗ ನಂಕದಿ ಕುಳಿತು ।
ಭೃಂಗ ಕುಂತಳೆ ಹೃದಯದಂಗಳದೊಳು ಆಡೆ ॥ ೪ ॥

ಇಂದಿರೇಶನರಾಣಿ ನೀ ಎನ್ನ । ಮನ ಮಂದಿರದೊಳು ಬಾ ನೀ ।
ನಂದ ಗೋಕುಲ ಬಾಲನಿಂದು ಕರದೊಳೆತ್ತಿ ।
ತಂದು ತೋರಿಸೆ ಅರವಿಂದ ನಿಲಯೆ ಲಕ್ಷ್ಮೀ ॥ ೫ ॥

baare venkataramani

ಶ್ರೀಮಹಾಲಕ್ಷ್ಮೀಯ ಅಲಂಕರಿಸಿ ಕರೆದರು ॥ ಪ ॥

ಕೇಶವ ನಿಮ್ಮ ನಾಮ ಮಾಂಗಲ್ಯಸೂತ್ರ ತಾಳಿ ।
ನಾರಾಯಣ ನಿಮ್ಮ ನಾಮ ತಾಳಿ ಪದಕವು ।
ಮಾಧವ ನಿಮ್ಮ ನಾಮ ಸುರಗಿ ಸಂಪಿಗೆ ಮೊಗ್ಗು ।
ಗೋವಿಂದ ನಿಮ್ಮ ನಾಮ ಗೋಧಿಯ ಸರವು ॥ ೧ ॥

ವಿಷ್ಣುವೆ ನಿಮ್ಮ ನಾಮ ರತ್ನ ಕುಂಡಲಗಳು ।
ಮಧುಸೂಧನ ನಿಮ್ಮ ನಾಮ ಮಾಣಿಕ್ಯದ ಹರಳು ।
ತ್ರಿವಿಕ್ರಮ ನಿಮ್ಮ ನಾಮ ವಂಕಿ ನಾಗಮುರುಗಿಯು ।
ವಾಮನ ನಿಮ್ಮ ನಾಮ ಓಲೆ ಏಕಾವಳಿಯು ॥ ೨ ॥

ಶ್ರೀಧರ ನಿಮ್ಮ ನಾಮ ಒಳ್ಳೆ ಮುತ್ತಿನ ಹಾರ ।
ಹೃಷಿಕೇಶ ನಿಮ್ಮ ನಾಮ ಕಡಗ ಗೆಜ್ಜೆಯು ।
ಪದ್ಮನಾಭ ನಿಮ್ಮ ನಾಮ ಮುತ್ತಿನಡ್ಡಿಕೆಯು ।
ದಾಮೋದರ ನಿಮ್ಮ ನಾಮ ರತ್ನದ ಪದಕವು ॥ ೩ ॥

ಸಂಕರ್ಷಣ ನಿಮ್ಮ ನಾಮ ವಂಕಿ ತೋಳಾಯಿತು ।
ವಾಸುದೇವ ನಿಮ್ಮ ನಾಮ ಒಲಿದ ತೋಡೆ ।
ಪ್ರದ್ಯುಮ್ನ ನಿಮ್ಮ ನಾಮ ಹಸ್ತ ಕಂಕಣ ಬಳೆ ।
ಅನಿರುದ್ಧ ನಿಮ್ಮ ನಾಮ ಮುಕುರ ಬುಲಾಕು ॥ ೪ ॥

ಪುರುಷೋತ್ತಮ ನಿಮ್ಮ ನಾಮ ಹೊಸ ಮುತ್ತಿನ ಮೂಗುತಿ ।
ಅಧೋಕ್ಷಜ ನಿಮ್ಮ ನಾಮ ಚಂದ್ರ ಸೂರ್ಯ ।
ನಾರಸಿಂಹ ನಿಮ್ಮ ನಾಮ ಚೌರಿ ರಾಗಟಿ ಗೊಂಡ್ಯ ।
ಅಚ್ಯುತ ನಿಮ್ಮ ನಾಮ ಮುತ್ತಿನ ಬೊಟ್ಟು ॥ ೫ ॥

ಜನಾರ್ಧನ ನಿಮ್ಮ ನಾಮ ಜರಿಯ ಪೀತಾಂಬರ ।
ಉಪೇಂದ್ರ ನಿಮ್ಮ ನಾಮ ಕಡಗ ಗೆಜ್ಜೆಯು ।
ಶ್ರೀಹರಿ ನಿಮ್ಮ ನಾಮ ಕಂಚು ಅಂಕಿಯ ತುಳಸಿ ।
ಶ್ರೀಕೃಷ್ಣ ನಿಮ್ಮ ನಾಮ ನಡುವಿನೊಡ್ಯಾಣವು ॥ ೬ ॥

ಸರಸಿಜಾಕ್ಷ ನಿಮ್ಮ ನಾಮ ಅರಶಿಣ ಎಣ್ಣೆ ಹಚ್ಚಿ ।
ಪಂಕಜಾಕ್ಷ ನಿಮ್ಮ ನಾಮ ಕುಂಕುಮ ಕಾಡಿಗೆಯು ।
ಪುರಂದರ ವಿಠ್ಠಲ ನಿಮ್ಮ ನಾಮ ಸರ್ವಾಭರಣವು ।
ನಿಲುವುಗನ್ನಡಿಯಲಿ ಲಲನೆಯ ತೋರಿಸುತ ॥ ೭ ॥

Sri Mahalakshmi alankarisi

ನಿಲ್ಲೇ ನಿಲ್ಲೇ ಕೊಲ್ಹಾಪುರದೇವಿ । ಇಲ್ಲೇ ಬಾರೆ ಗೆಜ್ಜೆ ಘಿಲ್ಲೆನುತಾ ॥ ಪ ॥

ಕರುಣಾ ಸಾಗರ ಹರಿ ತರುಣಿಯೆ ನೀ
ಕೋಟಿ ತರುಣ ಕಿರಣ ರತ್ನಾಭರಣವಿಟ್ಟು ।
ಮಣಿ ಕೌಸ್ತುಭ ವಕ್ಷಸ್ಥಳದಲ್ಹೊಳೆಯುತ ।
ಸುಪರ್ಣವಾಹನ ಲಕ್ಷ್ಮೀ ಶರಣ ವಂದಿತಳೆ ॥ ೧ ॥

ಪಂಕಜಾಕ್ಷಿ ಪಂಕಜೋದ್ಭವ ಜನನೀ ।
ಪಂಕಜ ಮುಖಿ ಪಾಲಿಸೆ ಎನ್ನ ।
ಪಂಕಜನಾಭನ ಅಂಕದಲ್ಲೊಪ್ಪುವ ।
ಪಂಕಜೆ ನಿನ್ನ ಪಾದ ಪಂಕಜಕ್ಕೆರಗುವೆ ॥ ೨ ॥

ಮುಗುಳು ನಗೆಯ ಮುತ್ತುಗಳುದುರಿಸುತ ।
ಕರ್ಣಗಳ ವಾಲೆ ಕದಪಿನಲ್ಹೊಳೆಯೆ ।
ಬಗೆ ಬಗೆ ಸರ ಬಂಗಾರವನಿಟ್ಟು ।
ಮೂರ್ ಜಗವ ಮೋಹಿಸುವ ಜಗದಾಧಿಪನ ರಾಣಿ ॥ ೩ ॥

ಸಾಗರದೊಳಗ್ಹುಟ್ಟಿ ಆಗ ಶ್ರೀನಾಥನ ।
ಬ್ಯಾಗ ನೋಡಿ ಪರಮೋತ್ಸವದಿ ।
ನಾಗಶಯನ ನಾಗಾರಿ ವಾಹನನ ।
ಅರ್ಧಾಂಗಿ ಎನಿಸಿದನಂತ ಮಹಿಮಳೇ ॥ ೪ ॥

ಶೇಷ ಗಿರಿಯ ಶ್ರೀನಿವಾಸನ ಎದೆಯಲಿ ।
ವಾಸವಾಗಿರಲತಿ ಪ್ರೇಮದಲಿ ।
ಈಶ ನಾರದ ಬ್ರಹ್ಮಾಸುರರೊಡೆಯ ।
ಭೀಮೇಶ ಕೃಷ್ಣನ ನಿಜ ದಾಸರಿಗ್ವರವೀಯೇ ॥ ೫ ॥

[Nille nille kolhaapuradevi]

ಅರವಿಂದಾಲಯೇ ತಾಯೇ ಶಾರಣು ಹೊಕ್ಕೆನು ತಾಯೆ ।
ಸಿರಿರಮಣನ ಪ್ರೀಯೆ ಜಗನ್ಮಾತೇ ॥ ಪ ॥

ಕಮಲ ಸುಗಂಧಿಯೇ । ಕಮಲ ದಳ ನೇತ್ರಿಯೇ ।
ಕಮಲ ವಿಮಲ ಶೋಭಿತೇ ॥
ಕಮನೀಯ ಹಸ್ತ ಪಾದ । ಕಮಲ ವಿರಾಜಿತೆ ।
ಕಮಲೇ ಕಾಯೇ ಎನ್ನನೂ । ತಾಯೇ । ಕಮಲೇ ಕಾಯೇ ಎನ್ನನೂ ॥ ೧ ॥

ನಿನ್ನ ಕರುಣ ಕಟಾಕ್ಷ । ವೀಕ್ಷಣದಿಂದ ।
ತನುಮನಗಳನಿತ್ತೇ। ಧನ್ಯ ವಿರಾಜಿತೆಪ ।
ಅಜಭವಾದಿಗಳ । ಪ್ರಸನ್ನೇ ಕಾಯೇ ಎನ್ನನೂ ।
ತಾಯೇ । ಪ್ರಸನ್ನೇ ಕಾಯೇ ಎನ್ನನೂ ॥ ೨ ॥

ನಿನ್ನ ಉರದಲ್ಲಿ ಧರಿಸಿದನೆಂಬಂಥ ।
ಗರುವದಿ ಮೆರೆಯದಿರೆ ॥ ನಿರುತ ನಿನ್ನಯ ಮುದ್ದು ।
ಪುರಂದರವಿಠ್ಠಲನ ಚರಣಕಮಲವ ತೋರಿಸೇ ।
ತಾಯೇ । ಚರಣಕಮಲವ ತೋರಿಸೇ ॥ ೩ ॥

Aravindaalaye taaye

ಆರಿಗೆ ವಧುವಾದೆ ಅಂಬುಜಾಕ್ಷಿ ನೀ ॥ ಪ ॥

ಕ್ಷೀರಾಬ್ಧಿ ಕನ್ನಿಕೆ ಶ್ರೀ ಮಹಾಲಕುಮಿ ನೀ ॥ ಅ. ಪ ॥

ಶರಧಿ ಬಂಧನ ರಾಮಚಂದ್ರ ಮೂರುತಿಗೋ ।
ಪರಮಾತ್ಮ ಶ್ರೀ ಅನಂತ ಪದ್ಮನಾಭನಿಗೋ ॥
ಸರಸಿಜನಾಭ ಜನಾರ್ಧನ ಮೂರುತಿಗೋ ।
ಎರಡು ಹೊಳೆಯ ರಂಗ ಪಟ್ಟಣವಾಸಗೋ ॥ ೧ ॥

ಚೆಲುವ ಬೇಲೂರ ಚೆನ್ನಿಗರಾಯನಿಗೋ ।
ಕೆಳದಿ ಹೇಳುಡುಪಿಯ ಕೃಷ್ಣರಾಯನಿಗೋ ॥
ಇಳೆಯೊಳು ಪಂಢರಪುರ ನಿಲಯ ವಿಠ್ಠಲಗೋ ।
ನಳಿನಾಕ್ಷಿ ಹೇಳು ಬದರಿ ನಾರಾಯಣನಿಗೋ ॥ ೨ ॥

ಮಲಯಜ ಗಂಧಿ ಬಿಂದು ಮಾಧವ ರಾಯಗೋ ।
ಸುಲಭ ದೇವರ ದೇವ ಪುರುಷೋತ್ತಮನಿಗೋ ॥
ಫಲದಾಯಕ ನಿತ್ಯ ಮಂಗಳದಾಯಕಗೋ ।
ಚೆಲುವೆ ನಾಚದೆ ಹೇಳು ಶ್ರೀವೇಂಕಟೇಶಗೋ ॥ ೩ ॥

ವಾಸವಾರ್ಚಿತ ಕಂಚಿ ವರದರಾಜ ಮೂರುತಿಗೋ ।
ಅಸುರಾರಿ ಶ್ರೀಮುಷ್ಣಾದಿ ವರಹನಿಗೋ ॥
ಶೇಷಶಾಯಿಯಾದ ಶ್ರೀರಂಗನಾಯಕಗೋ ।
ಸಾಸಿರ ನಾಮದೊಡೆಯ ಅಳಗಿರೀಶಗೋ ॥ ೪ ॥

ಶರಣಾಗತರ ಪೊರೆವ ಶಾಙ್ಗ(ಸಾರಂಗ)ಪಾಣಿಗೋ ।
ವರಗಳನೀವ ಶ್ರೀನಿವಾಸ ಮೂರುತಿಗೋ ॥
ಕುರುಕುಲಾಂತಕ ನಮ್ಮ ರಾಜಗೋಪಾಲ ಮೂರುತಿಗೋ ।
ಸ್ಥಿರವಾದ ಪುರಂದರವಿಠ್ಠಲರಾಯನಿಗೋ ॥ ೫ ॥

Aarige vadhuvaade ambujaakshi

ಜಯ ಕೊಲ್ಹಾಪುರ ನಿಲಯೇ । ಭಜದಿಷ್ಟೇತರ ನಿಲಯೇ ।
ತವ ಪಾದೌ ಹೃದಿ ಕಲಯೇ । ರತ್ನ ರಚಿತ ವಲಯೇ ॥ ಪ ॥

ಜಯ ಜಯ ಸಾಗರ ಜಾತೇ । ಕುರು ಕರುಣಾಂಮಯಿ ಭೀತೇ ।
ಜಗದಂಬಾ ಭಿದಯಾತೇ । ಜೀವತಿ ತವ ಪೋತೇ ॥ ೧ ॥

ಜಯ ಜಯ ಸಾಗರ ಸದನಾ । ಜಯ ಕಾಂತ್ಯಾ ಜಿತ ಮದನಾ ।
ಜಯ ದುಷ್ಟಾಂತಕ ಕದನಾ । ಕುಂದ ಮುಕುಲರದನಾ ॥ ೨ ॥

ಸುರ ರಮಣಿನುತ ಚರಣೇ । ಸುಮನಃ ಸಂಕಟ ಹರಣೇ ।
ಸುಸ್ವರ ರಂಜಿತ ವೀಣೇ । ಸುಂದರ ನಿಜ ಕಿರಣೇ ॥ ೩ ॥

ಭಜದಿಂದೀವರ ಸೋಮಾ । ಭವ ಮುಖ್ಯಾಮರ ಕಾಮಾ ।
ಭಯಮೂಲಾಳಿವಿರಾಮಾ । ಭಂಜಿತ ಮುನಿ ಭೀಮಾ ॥ ೪ ॥

ಕುಂಕುಮ ರಂಜಿತ ಫಾಲೇ । ಕುಂಜರ ಭಾಂಧವ ಲೋಲೇ ।
ಕಲದೌತಾಮಲ ಚೇಲೇ । ಕೃಂತ ಕುಜನ ಜಾಲೇ ॥ ೫ ॥

ಧೃತ ಕರುಣಾ ರಸಪೂರೇ । ಧನ ಧಾನ್ಯೋತ್ಸವ ಧೀರೇ ।
ಧ್ವನಿಲವ ನಿಂದಿತ ಕೀರೇ । ಧೀರೇ ದನುಜ ದಾರೇ ॥ ೬ ॥

ಸುರ ಹೃತ್ಪಂಜರ ಕೀರಾ । ಸುಮಗೆ ಅರ್ಪಿತ ಹಾರಾ ।
ಸುಂದರ ಕುಂಜ ವಿಹಾರ । ಸುರವರ ಪರಿವಾರ ॥ ೭ ॥

ವರಕಬರೀ ಧೃತಕುಸುಮೇ । ವರ ಕನಕಾಧಿಕ ಸುಷಮೇ ।
ವನ ನಿಲಯಾ ದಯ ಭೀಮೇ । ವದನ ವಿಜಿತ ಸೋಮೇ ॥ ೮ ॥

ಮದಕಲಭಾ ಲಸಗಮನೇ । ಮಧು ಮಥನಾ ಲಸನಯನೇ ।
ಮೃದು ಲೋಲಾಕ ರಚನೆ । ಮಧುರ ಸರಸ ಗಾನೇ ॥ ೯ ॥

ವ್ಯಾಘ್ರಪುರೀ ವರನಿಲಯೇ । ವ್ಯಾಸ ಪದಾರ್ಪಿತ ಹೃದಯೇ ।
ಕುರು ಕರುಣಾಂ ಮಹಿ ಸದಯೇ । ವಿವಿಧ ನಿಗಮ ಗೇಯೇ ॥ ೧೦ ॥

Jaya kolhapura nilaye

ಒಲಿದೆ ಯಾತಕಮ್ಮಾ ಲಕುಮಿ ವಾಸುದೇವಗೆ ॥ ಪ ॥

ಹಲವಂಗದವನ ಹವಣೆ ತಿಳಿದು ತಿಳಿದು ತಿಳಿಯದ ಹಾಗೆ ॥ ಅ. ಪ ॥

ಕಮಲಗಂಧಿ ಕೋಮಲಾಂಗಿ ಸುಂದರಾಬ್ಜವದನೆ ನೀನು ।
ರಮಣ ಮತ್ಸ್ಯ ಕಠಿಣ ಕಾಯ ಸೂಕರಾಸ್ಯನು ॥
ರಮಣೀಯ ಸ್ವರೂಪಿ ನೀನು ಅಮಿತ ಘೋರ ರೂಪನವನು ।
ನಮಿಪರಿಷ್ಟದಾನಿ ನೀನು ದಾನವ ಬೇಡುವವನಿಗೆ ॥ ೧ ॥

ಲಲಿತ ಚಾರು ಶೀಲೆ ನೀನು ಕಲ್ಕಿ ಕಲಹ ಪ್ರೀಯನವನು ।
ಕುಲದ ಕುರುಹು ಇಲ್ಲಾ ಗುಣದ ನೆಲೆಯ ಕಂಡಿಲ್ಲಾ ।
ಹಲವು ಕಾಲದವನು ಅವನ ಬಳಗ ಬಂಧು ನಿಷ್ಕಿಂಚನನು ।
ಜಲಧಿ ಆಲದೆಲೆಯ ಮೇಲೆ ಮಲಗಿ ಬೆರಳ ಚೀಪುವವನಿಗೆ ॥ ೨ ॥

ಸ್ವರತಾನ ಪೇಕ್ಷಕಾಮಿ ನಿದ್ರಾಹೀನ ಅನಶನಿಯು ।
ಸ್ಪರ್ಶರೂಪ ವಾಚ್ಯ ಶಬ್ದ ಅಮಿತ ಭೋಕ್ತನು ॥
ಗುರು ಗೋಪಾಲವಿಠ್ಠಲನು ನಿರುತ ತನ್ನ ವಕ್ಷದೊಳು ।
ಅರಮನೆಯ ಮಾಡಿ ಕೊಟ್ಟು ಮರಳು ಮಾಡಿದ ಮಾಯಾವಿಗೆ ॥ ೩ ॥

Olide yaatakammaa lakumi

ವೆಂಕಟಾದ್ರಿ ನಿಲಯನ । ಪಂಕಜನಾಭನ ತೋರವ್ವ ಲಕುಮಿ ॥ ಪ ॥

ವಸುದೇವ ದೇವಕಿ ಕಂದಾ ನಮ್ಮ । ಶಶಿಮುಖಿಯರೊಡನೆ ಆನಂದ ॥
ಪಶುಗಳ ಕಾಯ್ದ ಗೋವಿಂದಾ ನಮ್ಮ । ಬಿಸಜನಾಭ ಮುಕುಂದನ ॥ ೧ ॥

ಸಾಮರಾಜನ ವರದಾ ಬಲು । ಪ್ರೇಮದಿ ಭಕುತರ ಪೊರೆದ ॥
ಆ ಮಹಾ ದಿತಿಜರ ತರಿದ । ನಿಸ್ಸೀಮ ಮಹಿಮನಾಗಿ ಮೆರೆದಂಥವನ ॥ ೨ ॥

ಉರಗಾದ್ರಿ ಗಿರಿಯಲ್ಲಿಪ್ಪ ನಮ್ಮ । ಮರುತನ ಪೆಗಲೇರಿ ಬಪ್ಪ ॥
ಶರಣರಿಗೊಲಿಯುತಿಪ್ಪ । ಸಿರಿ । ಮೋಹನವಿಠ್ಠಲ ತಿಮ್ಮಪ್ಪನ ॥ ೩ ॥

Venkatadhri nilayana

ಹೂವ ಕೊಡೆ ತಾಯಿ ವರವ ಕೊಡೆ ।
ದೇವಿ ನಿನ್ನಯ ಮುಡಿವ್ಯಾಲಿದ್ದ ಮಲ್ಲಿಗೆ ॥ ಪ ॥

ಕಟ್ಟುವೋ ತೊಟ್ಟಿಲ್ಪುಟ್ಟುವೊ ಗಂಡು ಮಕ್ಕಳು ।
ಮುತ್ತೈದೆ ತನವ ಮುದದಿಂದ ।
ಮುತ್ತೈದೆ ತನವ ಮುದದಿಂದ ಬೇಡುವೆ ।
ಶ್ರೀಮಹಾಲಕ್ಷ್ಮೀಯೆ ನಮಗೆ ದಯ ಮಾಡೇ ॥ ೧ ॥

ಅಂದಣರಥ ಬಂದ್ಹೋಗುವ ಹೆಣ್ಣುಮಕ್ಕಳು ।
ಬಂಧುಗಳಿಗೆಲ್ಲ ಬಲು ಕ್ಷೇಮ ।
ಬಂಧುಗಳಿಗೆಲ್ಲ ಬಲು ಕ್ಷೇಮ ಇರುವಂತೆ ।
ಇಂದಿರಾದೇವಿ ದಯಮಾಡೆ ॥ ೨ ॥

ದಂಪತಿ ನಲಿಸುತ ಸಂಪತ್ತು ಸೌಭಾಗ್ಯ ।
ಇಂಥ ಮಂದಿರಕೆ ಬಹುಮಾನ ।
ಇಂಥ ಮಂದಿರಕೆ ಬಹುಮಾನ ಇರುವಂತೆ ।
ಸಂತೋಷದಿಂದ ವರವ ದಯಮಾಡೆ ॥ ೩ ॥

ಅನ್ನ ಗೋವ್ಗಳು ದಿವ್ಯ ಕನ್ಯಾ ಭೂದಾನ ।
ಹಿರಣ್ಯ ದಾನಗಳ ಹಿತದಿಂದ ।
ಹಿರಣ್ಯ ದಾನಗಳ ಹಿತದಿಂದ ಮಾಡುವಂತೆ ।
ಸಂಪನ್ನೇ ನೀ ವರವ ದಯ ಮಾಡೇ ॥ ೪ ॥

ಇಂದಿರೆ ಮನೋಭೀಷ್ಟ ಎಂದೆಂದಿಗೆ
ನಿನ್ನ ಪಾದ ।ಹೊಂದಿರಲೆಂದೂ ।
ಎಂದೆಂದಿಗೆ ನಿನ್ನ ಪಾದ ಹೊಂದಿರಲೆಂದೂ ।
ಮರೆಯದೆ ಭೀಮೇಶಕೃಷ್ಣನರ್ಧಾಂಗಿ ನೀ ವರವ ದಯ ಮಾಡೇ ॥ ೫ ॥

[Hoova kode taayi varava kode]